ಎನ್ನುತ್ತಾರೆ ಕುವೆಂಪು. ತಮ್ಮ ಕಾವ್ಯವಾಚನದಿಂದ ಅವರ ಅಂತರಂಗವನ್ನು ಇನ್ನಿಲ್ಲದಂತೆ ಆಕರ್ಷಿಸಿದ್ದ ಕೃಷ್ಣರಾಯರು 1934ರ ವೇಳೆ ಮಹಾರಾಜಾ ಕಾಲೇಜಿನಲ್ಲಿ ಸರಸ್ವತಿ ಭಂಡಾರಿಯಾಗಿದ್ದರು. ಆಗ ಕಾಲೇಜಿನ ಪ್ರಾಂಶುಪಾಲರಾಗಿದ್ದ ಜೆ.ಸಿ. ರಾಲೋ ಅವರಿಗೆ ಕನ್ನಡದಲ್ಲಿ ಬೇರೆಬೇರೆಯ ರಾಗಗಳ ಷಟ್ಪದಿಗಳನ್ನು ಓದಿ ಇಂಗ್ಲಿಷಿನಲ್ಲಿ ಅರ್ಥ ಮಾಡಿಸಿ ಹೇಳುತ್ತಿದ್ದರಂತೆ. 1899ರಲ್ಲಿ ಧಾರವಾಡದ ಗುರುರಾವ್ ದೇಶಪಾಂಡೆ ಅವರು ಗದುಗಿನ ಭಾರತವನ್ನು ಓದಿದರೆ ಕವಿ, ವಿದ್ವಾಂಸ ಬೆಟಗೇರಿ ಕೃಷ್ಣಶರ್ಮರು ವ್ಯಾಖ್ಯಾನ ಮಾಡುತ್ತಿದ್ದರಂತೆ. ಮೇಲುವರ್ಗದವರು ಮಾತ್ರ ಕುಮಾರವ್ಯಾಸನನ್ನು ತಮ್ಮ ವಾಚನ–ಪ್ರವಚನಕ್ಕೆ ಸ್ವೀಕರಿಸಿದ್ದಕ್ಕಿಂತ ಮುಖ್ಯವಾಗಿ ತಳವರ್ಗದವರೂ ಕೂಡ ಈ ಕಾವ್ಯವನ್ನು ಕರ್ನಾಟಕದ ಎಲ್ಲೆಡೆ ಓದಿರುತ್ತಾರೆ. ಚಿತ್ರದುರ್ಗದ ಒಂದು ಬುಡಕಟ್ಟು ಹಟ್ಟಿಯಲ್ಲಿ ಅಕ್ಷರಬಲ್ಲ ವ್ಯಕ್ತಿಯೊಬ್ಬ, ತನ್ನ ಭಾರತ ಕಥಾಮಂಜರಿ ಓದಿಗೆ ಶ್ರೋತೃಗಳು ಯಾರೂ ಭಾಗವಹಿಸದಿದ್ದರೂ, ಮಾರಿಗುಡಿಯ ಮುಂದಿನ ಅಂಗಳದಲ್ಲಿ ತನಗೆ ತಾನೇ ಓದುವ ಪರಿಪಾಠ ಇಟ್ಟುಕೊಂಡಿದ್ದ. ಈ ಬಗೆಯ ಅಸಂಖ್ಯಾತ ಓದುಗರು ದಾಖಲೆ ಇಲ್ಲದವರು!

ಕುಮಾರವ್ಯಾಸನ ಈ ಬಗೆಯ ಜನಪ್ರಿಯತೆಗೆ ಕಾರಣ ಹುಡುಕುವುದೇನೂ ಕಷ್ಟವಲ್ಲ. ಜೈನ ಪರಂಪರೆಯಲ್ಲಿ ಬಂದ ಪಂಪ, ರನ್ನ, ಪೊನ್ನಾದಿಗಳು ತಮ್ಮ ಕಾವ್ಯವನ್ನು ತಂತಮ್ಮ ಆಶ್ರಯದಾತ ರಾಜರು ಮತ್ತು ಇತಿಹಾಸಕ್ಕೆ ಲಗತ್ತಿಸಿ ಹೇಳುತ್ತಲೇ ತಮ್ಮ ಕೃತಿಗಳೇನಿದ್ದರೂ ಪಂಡಿತಮಾನ್ಯ ಎಂದು ಹೇಳಿಕೊಂಡರು. ಪಂಪನು 'ಪಂಡಿತರೆ ತಗುಳ್ದು ಬಿಚ್ಚಟಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ....' ಎಂದರೆ ರನ್ನನು 'ಆರಾತೀಯ ಕವೀಶ್ವರರಾರುಂ ಮುನ್ನಾರ್ತರಿಲ್ಲ, ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ...' ಎಂದಿದ್ದಾನೆ. ಆದರೆ ಅವರ ಕಾವ್ಯ ರಚನಾ ವಿಚಾರಗಳ ಸಂಪೂರ್ಣ ಇನ್ನೊಂದು ದಿಕ್ಕಿನ ತಿರುವು ಎಂಬಂತೆ ವಚನ ಯುಗ ಆರಂಭವಾಗಿ ಸಂಪೂರ್ಣ ಪಂಡಿತ ಭಾಷೆಯ ಕಾವ್ಯ ಕಥನ ಕ್ರಮವನ್ನೇ ಬದಲಿಸುವ ಹವಣಿಕೆಯಲ್ಲಿ ದೇಹ ಪರಾಕ್ರಮಕ್ಕಿಂತಲೂ, ಯುದ್ಧ ಸಾಧನೆಗಿಂತಲೂ ಆತ್ಮೋನ್ನತಿಯೇ ದೊಡ್ಡದೆಂಬ ಮಾರ್ಗದಲ್ಲಿ ಶರಣರು ಕಾಯಕ ಮತ್ತು ಭಕ್ತಿ ತತ್ತ್ವವನ್ನು ಪ್ರಚಾರಕ್ಕೆ ತಂದರು.

ಶತಶತಮಾನಗಳಿಂದಲೂ ಈ ನೆಲದ ಜನ ಭಕ್ತಿಯನ್ನು ಮುಗ್ಧಭಾವದಲ್ಲೋ, ರೂಕ್ಷ ಕ್ರಮದಲ್ಲೋ ಪೋಷಿಸಿಕೊಂಡು ಬರುತ್ತಿರುವಲ್ಲಿ ಅದು ಜನಸಮೂಹದ ನಡುವೆ ತೀವ್ರ ಪ್ರಭಾವ ಬೀರುವ ಸಂದರ್ಭದಲ್ಲೇ ಕುಮಾರವ್ಯಾಸನು ಹುಟ್ಟಿ ಬಂದದ್ದು. ಹಾಗೆ ಜನಮಾನಸದಲ್ಲಿ ಹುದುಗಿಯೇ ಇದ್ದ ಭಕ್ತಿ ಸಂಗತಿಯನ್ನು ಕುಮಾರವ್ಯಾಸ ತನ್ನ ಕಾವ್ಯ ಕಥನದ ಮುಖ್ಯ ಧಾರೆಯನ್ನಾಗಿಸಿಕೊಂಡ. ಆ ಹಿನ್ನೆಲೆಯಲ್ಲೇ ತಾನು ಬರೆಯುತ್ತಿರುವ ಕಾವ್ಯ ಪಂಡಿತ ಮಂಡಳಿಗೆ ಅಲ್ಲ, ಸಾಮಾನ್ಯರ ಅವಗಾಹನೆಗೆ ಎಂದ. ಅಲ್ಲದೆ ತಾನು ಹೇಳುತ್ತಿರುವುದು ಅರಸಾಳ್ವಿಕೆಯ ಕಥೆಯಾದರೂ, ಕಥನದ ನಾಯಕ ವಿಷ್ಣು ಸ್ವರೂಪನಾದ ಕೃಷ್ಣನೇ ಎಂದ. ಅದಾಗ ತಾನೇ ಶರಣರ ಯುಗ ಮುಗಿದು, ವೈಷ್ಣವ ಪರಂಪರೆಯ ಕೀರ್ತನ ಯುಗ ಆರಂಭವಾಗಿದ್ದಿತು. ಕವಿ ನಾರಣಪ್ಪನು ತನ್ನನ್ನು ಶ್ರೀಮತ್ಕುಮಾರವ್ಯಾಸ ಯೋಗೀಂದ್ರ ಎಂದುಕೊಂಡದ್ದಲ್ಲದೆ, ವ್ಯಾಸಮುನಿಯ ಪುತ್ರ, ಶುಕರೂಪ ಎಂದೆಲ್ಲ ಕರೆದುಕೊಂಡ. ಇದಿಷ್ಟು ಬಿಟ್ಟರೆ ಶರಣರಂತೆ, ಕೀರ್ತನಕಾರರಂತೆ ತನ್ನ ವೈಯಕ್ತಿಕ ಸಂಗತಿಗಳೇನನ್ನೂ ಹೇಳಿಕೊಳ್ಳದೆ ಅದೆಲ್ಲವನ್ನೂ ತಾನು ನಂಬಿದ ದೈವಕ್ಕೇ ಸಮರ್ಪಿಸಿದ.

ಮನುಷ್ಯ ಜೀವನಕ್ಕೆ ಒಂದು ಕ್ರಮವಿದೆ. ಈ ಲೋಕದಲ್ಲಿ ಮನುಷ್ಯ ಪರಾಕ್ರಮದ ಆಟಕ್ಕೆಲ್ಲ ಸ್ವಾತಂತ್ರ್ಯವಿದೆ. ಆದರೆ ಅದು ಸ್ವೇಚ್ಛೆಯದಲ್ಲ. ಅದಕ್ಕೊಂದು ನಿಯಮಾವಳಿ ಇದ್ದೇ ಇದೆಯೆಂಬ ತತ್ತ್ವದಡಿ ಕವಿ ತನ್ನ ಕಥನದ ಪಾತ್ರಗಳನ್ನು ನಡೆಸುತ್ತಾನೆ. ಕುಮಾರವ್ಯಾಸನು ಸ್ವತಃ ಅಸಾಧಾರಣ ಶಕ್ತಿ, ಪಾಂಡಿತ್ಯ, ಪ್ರತಿಭೆಯುಳ್ಳ ಕವಿಯಾದರೂ ತನ್ನ ಕಾವ್ಯ ಕರ್ತೃ ವೀರನಾರಾಯಣನೇ,